# ಸೀರೆ ಕಸೂತಿ ಕಲೆಯಲ್ಲಿ ಮಹಾಲಕ್ಷ್ಮಿ ಅಷ್ಟೋತ್ತರ




ಸಾಮಾನ್ಯವಾಗಿ ಹಬ್ಬಗಳ ಸಂದರ್ಭದಲ್ಲಿ ದೇವಾನುದೇವತೆಗಳ ಅಷ್ಟೋತ್ತರ, ಶತ ನಾಮಾವಳಿಗಳನ್ನು ಪಠಿಸುವುದು ಇದೆ. ವರಮಹಾಲಕ್ಷ್ಮಿ ಸಂದರ್ಭದಲ್ಲಿ ಮಹಾಲಕ್ಷ್ಮೀ ಅಷ್ಟೋತ್ತರ ಮತ್ತು ಫಲಗಳ ಬಗ್ಗೆ ಪಾರಾಯಣವಾದರೆ, ನವರಾತ್ರಿಯ ಒಂಬತ್ತೂ ದಿನಗಳು ದೇವಿಯ ಸೌಂದರ್ಯಲಹರಿ ಪಠಣ.

ಮಹಾಲಕ್ಷ್ಮೀ ಅಷ್ಟೋತ್ತರ ಓದುವವರು ಬೆಳಿಗ್ಗೆ ಗಣಪತಿ ಪೂಜೆ, ಮನೆದೇವರ ಪೂಜೆ ಮಾಡಿ ನಂತರ ಓದಬೇಕು. ಪೂಜೆಯ ನಂತರ ದೇವಿಯ ಪ್ರೀತಿಗಾಗಿ ಪಾನಕ, ಕೋಸಂಬರಿ, ಹಣ್ಣು ನೈವೇದ್ಯ ಮಾಡಿ ತಾಂಬೂಲದೊಡನೆ ಸುಮಂಗಲಿಯರಿಗೆ ದಾನ ಮಾಡಬೇಕು. ಇವೆಲ್ಲ ಪೂಜೆ, ಪುನಸ್ಕಾರ, ಪಠಣ ಪಾರಾಯಣದ ಮಾತಾಯಿತು.


ಪದ್ಮಾ ಮಂಜುನಾಥ್

ಬೆಂಗಳೂರಿನ ಪದ್ಮಾ ಮಂಜುನಾಥ್ ಅವರಿಗೆ ಮಹಾಲಕ್ಷ್ಮಿಯ ಮೇಲೆ ವಿಭಿನ್ನ ಹಾಗೂ ವಿಶೇಷ ಮೋಹ. ಅದು ಸಾಕಾರಗೊಂಡದ್ದು ರೇಷ್ಮೆ ಸೀರೆಯ ಮೇಲೆ ಕಸೂತಿಯಲ್ಲಿ ಮೂಡಿಸಿದ ಮಹಾಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ ಮೂಲಕ. ಕಲೆಯ ಹರಹು ವಿಶಾಲ. ಇದರೊಡನೆ ಭಕ್ತಿಯೂ ಸೇರಿದರೆ ಹೊಸ ಆಯಾಮ ದೊರಕುತ್ತದೆಂಬುದಕ್ಕೆ ಬೆಂಗಳೂರಿನ ಪದ್ಮಾ ಮಂಜುನಾಥ್ ಅವರು ಹಸಿರು ರೇಷ್ಮೆ ವಸ್ತ್ರದ ಮೇಲೆ ಕಸೂತಿಯಲ್ಲಿ ಮೂಡಿಸಿರುವ ಶತನಾಮಾವಳಿಯೇ ಒಂದು ನಿದರ್ಶನ.

ಹಾಳೆಯ ಮೇಲೆ ಬರೆಯಲು ಕಷ್ಟವೆನಿಸುವುದನ್ನು ವಸ್ತ್ರದ ಮೇಲೆ ಕಸೂತಿಯಲ್ಲಿ ರಚಿಸಿರುವ ಕಲಾವಿದೆಯ ಸಂಕಲ್ಪ ಶ್ಲಾಘನೀಯ.ಪ್ರತಿ ನಾಮಾವಳಿಯ ಅಂತ್ಯದಲ್ಲಿರುವ ಮುತ್ತುಗಳು ಈ ಕಲಾಕೃತಿಯ ಅಂದವನ್ನು ಅಧಿಕಗೊಳಿಸಿವೆ. ಶೃಂಗೇರಿ ಗುರುಗಳಿಗೆ ಸಮರ್ಪಿಸಿ ಅವರ ಆಶೀರ್ವಾದ ಪಡೆದ ಬಳಿಕ ಇದನ್ನು ಸುಂದರ ಚೌಕಟ್ಟಿನಲ್ಲಿರಿಸಿ, 2019ರ ನವೆಂಬರ್ 22ರಂದುವಾಜರಹಳ್ಳಿಯ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಅನಾವರಣಗೊಳಿಸಲಾಯಿತು.

ಕಲೆ, ಹವ್ಯಾಸ, ಭಕ್ತಿ ಎಲ್ಲವೂ ಒಂದೆಡೆ ಸೇರಿ ಅದ್ಭುತ ಅನುಭೂತಿ ಸೃಷ್ಟಿಯಾದದ್ದಂತೂ ಸುಳ್ಳಲ್ಲ.

■ ಮಂಜುನಾಥ್ ಡಿ.ಎಸ್.


ಅನೇಕ ರಾಷ್ಟ್ರೀಯ ಪ್ರಶಸ್ತಿಗಳು ಮತ್ತು ಮಾನ್ಯತೆಗಳನ್ನು ವಿಜೇತ ಉತ್ಪನ್ನ

ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS

100% NATURAL

ARECA TEA

HEALTHY • TASTY • REFRESHING

ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ

ಮಧುಮೇಹ ನಿರ್ವಹಣೆಯಲ್ಲಿ ಸಹಾಯಕವಾಗಿದೆ

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ

ಶಕ್ತಿಯನ್ನು ಹೆಚ್ಚಿಸುತ್ತದೆ

ಒತ್ತಡವನ್ನು ನಿವಾರಿಸುತ್ತದೆ

ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ



5 ರುಚಿಕರ ಸ್ವಾದಗಳಲ್ಲಿ ಲಭ್ಯ
(10ರ ಮತ್ತು 30ರ ಪ್ಯಾಕ್)

ಪುದೀನ · ಶುಂಠಿ · ರೆಗ್ಯುಲರ್ · ನಿಂಬೆ · ತುಳಸಿ



ಪ್ರಮೋಟರ್ಸ್: ಗ್ರೀನ್ ರೆಮಿಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: arecatea@gmail.com

ಆನ್‌ಲೈನ್ ನಲ್ಲಿ ಖರೀದಿಸಿ
amazon · bigbasket · Flipkart

www.arecatea.in ನಲ್ಲೂ ಲಭ್ಯ